457 (39) **ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು)** ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಸ್ಕೈಬಸ್ ಯೋಜನೆಯನ್ನು ಮಂಗಳೂರಿನಲ್ಲಿ ಅಳವಡಿಸಲು ಕೊಂಕಣ ರೈಲ್ವೆ ನಿಗಮದವರ ಮುಂದೆ ಬಂದಿರುವಂತದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಇದರ ಸಾಧ್ಯತೆ ಮತ್ತು ವಾಹನ ಸಂಚಾರದ ವ್ಯವಸ್ಥೆಯ ಬಗ್ಗೆ ಸಮಗ್ರ ಅಧ್ಯಯನ ಮಾಡಲು ರಾಜ್ಯ ಸರ್ಕಾರ ಕೈಗೊಂಡ ಕ್ರಮವೇನು, ಇದಕ್ಕಾಗಿ ಬಿಡುಗಡೆ ಮಾಡಲು ಉದ್ದೇಶಿಸಿದ ಮೊತ್ತ ಎಷ್ಟು , ಹಾಗೂ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ) ಹೌದು

ಆ) ಮಂಗಳೂರು ನಗರಕ್ಕೆ ಸಮಗ್ರ ಸಂಚಾರ ಹಾಗೂ ಸಾರಿಗೆ ಅಧ್ಯಯನ ನಡೆಸುವ ಕಾರ್ಯ ಕೈಗೆತ್ತಿಕೊಳ್ಳಲಾಗಿದ್ದು, ಕೇಂದ್ರ ಸರ್ಕಾರದಿಂದ ಆರ್ಥಿಕ ನೆರವನ್ನು ಕೋರಲಾಗಿದೆ ಈ ಅಧ್ಯಯನ ಕೈಗೊಳ್ಳುವ ಷರತ್ತು ಮತ್ತು ನಿಬಂಧನೆಗಳನ್ನು (Terms of Reference) ಅಂತಿಮಗೊಳಿಸಲಾಗುತ್ತಿದೆ

458 (41) **ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು)** ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ಭಯೋತ್ಪಾದಕ ಮತ್ತು ನಕ್ಸಲ್ ಚಟುವಟಿಕೆಯನ್ನು ಹತ್ತಿಕ್ಕಲು ಸರ್ಕಾರ ಕೈಗೊಂಡ ಕ್ರಮಗಳೇನು,

ಆ) ಈ ನಿಟ್ಟಿನಲ್ಲಿ ಆಗಿರುವ ಸಾಧನೆಗಳೇನು,

ಇ) ಕರ್ನಾಟಕದಲ್ಲಿ ವಾಸವಾಗಿರುವ ಪಾಕಿಸ್ತಾನ ಪ್ರಜೆಗಳೆಷ್ಟು,

ಈ) ನಿಷೇಧಿತ ಸಂಸ್ಥೆಗಳು, ಭಯೋತ್ಪಾದಕ ಸಂಸ್ಥೆಗಳು ಕರ್ನಾಟಕದಲ್ಲಿ ಕಾರ್ಯಾಚರಣೆಯಲ್ಲಿ ತೊಡಗಿರುವ ಪ್ರಮುಖರಿಗೆ ಆಶ್ರಯ ಕೊಟ್ಟ ಸ್ಥಳೀಯರು ಯಾರು, ಇವರುಗಳಲ್ಲಿ ಎಷ್ಟು ಜನರನ್ನು ಇದುವರೆವಿಗೂ ಬಂಧಿಸಲಾಗಿದೆ,

ಉ) ಈ ದಿಸೆಯಲ್ಲಿ ಗುವ್ತದಳದ ಕಾರ್ಯಚಟುವಟಿಕೆಯ ಸಾಧನೆಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಭಯೋತ್ಪಾದಕ ಚಟುವಟಿಕೆಯನ್ನು ಹತ್ತಿಕ್ಕಲು ರಾಜ್ಯ ಮಟ್ಟದಲ್ಲಿ ಈಗಾಗಲೇ ಐ ಜಿ ಪಿರವರ ನೇತೃತ್ವದಲ್ಲಿ ಉಗ್ರಗಾಮಿ ನಿರೋಧಕ ದಳ ಕಾರ್ಯನಿರ್ವಹಿಸುತ್ತಿದೆ ಈ ಪಡೆಯ ಬಲವರ್ಧನೆಗಾಗಿ 1 ಎಸ್ ಪಿ, 2 ಡಿ ವೈ ಎಸ್ ಪಿ, 3 ಪಿಐ, 40 ಪೊಲೀಸ್ ಪೇದೆಗಳು, 6 ಮಹಿಳಾ ಪೇದೆಗಳು ಮತ್ತು 10 ಎ ಪಿ ಸಿ ಚಾಲಕ ಹುದ್ದೆಗಳನ್ನು ಹೊಸದಾಗಿ ಸೃಜಿಸಲಾಗಿದೆ

ರಾಜ್ಯದಲ್ಲಿ ನಕ್ಸಲ್ ಸಮಸ್ಯೆಯನ್ನು ಹತ್ತಿಕ್ಕಲು ಎ ಎನ್ ಎಫ್ ತುಕಡಿಗಳು ನಕ್ಸಲ್ ಪೀಡಿತ ಜಿಲ್ಲೆಗಳ ಪೊಲೀಸ್ ಅಧೀಕ್ಷಕರುಗಳ ನೇತೃತ್ವದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿವೆ

ರಾಜ್ಯದಲ್ಲಿ ನಕ್ಸಲ್ ಚಟುವಟಿಕೆಯನ್ನು ಹತ್ತಿಕ್ಕಲು ನಕ್ಸಲ್ ಪೀಡಿತ ಜಿಲ್ಲೆಗಳಿಗೆ ವಿಶೇಷ ಅನುದಾನವನ್ನು ಮಂಜೂರು ಮಾಡಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ

ಎ ಎನ್ ಎಫ್ (ನಕ್ಸಲ್ ನಿಗ್ರಹ ದಳ) ತುಕಡಿಗಳನ್ನು ನಕ್ಸಲ್ ಬಾದಿತ ಜಿಲ್ಲೆಗಳಾದ ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಈಗಾಗಲೇ ನಿಯೋಜಿಸಲಾಗಿದೆ

ಆ) ಇಲ್ಲಿಯವರೆಗೆ ನಕ್ಸಲರು ಹಾಗೂ ಎ ಎನ್ ಎಫ್ ಯೋಧರ ನಡುವೆ ನಡೆದ ದಾಳಿ ಮತ್ತು ಪ್ರತಿದಾಳಿಗಳಲ್ಲಿ 10 ಜನ ನಕ್ಸಲರು ಮೃತಪಟ್ಟಿರುತ್ತಾರೆ ಹಾಗೂ ಅವರ ತರಬೇತಿ ಶಿಬಿರಗಳನ್ನು ಧ್ವಂಸ ಮಾಡಲಾಗಿದೆ ರಾಜ್ಯದಲ್ಲಿ 102 ನಕ್ಸಲರನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ ಪ್ರತಿನಿತ್ಯ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಎ ಎನ್ ಎಫ್ ಸಿಬ್ಬಂದಿಗಳು ಕೊಂಬಿಂಗ್ ಕಾರ್ಯಾಚರಣೆ ನಡೆಯುತ್ತಿದೆ

ಭಯೋತ್ಪಾದಕರ ವಿರುದ್ಧವೂ ಸಹ ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿದೆ ಬೆಂಗಳೂರು ಪೊಲೀಸರು ಎಲ್-ಇ-ಟಿ ಸಂಘಟನೆಗೆ ಸೇರಿದ ಏಳು ಉಗ್ರರನ್ನು ದಸ್ತಗಿರಿ ಮಾಡಿ ಅವರು ನಡೆಸಿದ ಕಾರ್ಯಾಚರಣೆಯಲ್ಲಿ ಐದು ಜನ ಆಲ್ ಉಮ್ಮ ಸಂಘಟನೆಯ ಉಗ್ರರು ಹಾಗೂ ಮೂರು ಜನ ಎಲ್ ಟಿ ಟಿ ಇ ಉಗ್ರರು ಮಡಿದಿರುತ್ತಾರೆ ಇದಲ್ಲದೆ 13 ಜನ ಎಲ್ ಟಿ ಟಿ ಇ ಸಂಘಟನೆಯ ಉಗ್ರರನ್ನು ಬಂಧಿಸಿ ಅವರಿಂದ ಶಸ್ತ್ರಾಸ್ತ್ರ ಮತ್ತು ಬಾಂಬ್‌ಗಳನ್ನು ವಶಪಡಿಸಿಕೊಂಡಿರುತ್ತಾರೆ ಚಾರ್ಜ್‌ಗಳನ್ನು ಸ್ಫೋಟಿಸಿದ ಪ್ರಕರಣಗಳಲ್ಲಿ 25 ದೀನ್ ದಾರ್ ಅಂಜುಮನ್ ಸಂಘಟನೆಯ ಉಗ್ರರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆ ಮೈಸೂರು ನಗರದ ಪೊಲೀಸರು

ಇಬ್ಬರು ಅಲ್–ಬದರ್ ಸಂಘಟನೆಗೆ ಸೇರಿದ ಉಗ್ರರನ್ನು ಬಂಧಿಸಿ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿರುತ್ತಾರೆ ಗುಲ್ಬರ್ಗಾ ಪೊಲೀಸರು ಎಲ್–ಇ–ಟಿ ಸಂಘಟನೆಗೆ ಸೇರಿದ ಒಬ್ಬ ಉಗ್ರನನ್ನು ಬಂಧಿಸಿ ಅವನಿಂದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿರುತ್ತಾರೆ

ರಾಜ್ಯದಲ್ಲಿ ನೆಲೆಯೂರಿರುವ ಉಗ್ರರ ಬಗ್ಗೆ ನಿಗಾ ವಹಿಸಲಾಗಿದೆ

ಇ) ಲಭ್ಯವಿರುವ ಮಾಹಿತಿ ಪ್ರಕಾರ ಕರ್ನಾಟಕದಲ್ಲಿ ವಾಸವಾಗಿರುವ ಪಾಕಿಸ್ತಾನಿ ಪ್ರಜೆಗಳ ಸಂಖ್ಯೆ ಒಟ್ಟು 232

ಈ) ಮೈಸೂರಿನಲ್ಲಿ ದಸ್ತಗಿರಿಯಾದ ಅಲ್–ಬದರ್ ಸಂಘಟನೆಯ ಉಗ್ರಗಾಮಿಗಳಿಗೆ ಸಹಾಯ ಮಾಡಿರುವ ಆರೋಪದ ಮೇಲೆಗೆ ಈ ಕೆಳಕಂಡ ಸ್ಥಳೀಯರು ಬಂಧನಕ್ಕೊಳಗಾಗಿದ್ದಾರೆ

1) ಇಸ್ಮಾಯಿಲ್ ಕೋಂ ಮಹಮ್ಮದ್, 18 ವರ್ಷ, ರಾಜೀವ್ ನಗರ

2) ರಫೀಕ್ ಅಹಮದ್

3) ಗೋವಾಲ್

4) ಸಾದಿಕ್ ಶರೀಫ್

5) ಕೆ ನಂಜಪ್ಪ

6) ಮೊಹೀನುದ್ದೀನ್ ಕೋಯಾ–ಈತನು ಆರೋಪಿ ಫಹಾದ್‌ಗೆ ಕಲ್ಲಿಕೋಟೆಯಲ್ಲಿ ಎರಡು ವರ್ಷದಿಂದ ವಾಸವಾಗಿದ್ದಾನೆಂದು ಪ್ರಮಾಣ ಪತ್ರ ಕೊಡಿಸಿ ಆ ಮೂಲಕ ಡಿ ಎಲ್ ಮಾಡಿಸಲು ನಕಲಿ ದಾಖಲೆಗಳನ್ನು ಸೃಷ್ಟಿಸಿರುತ್ತಾನೆ

ಉ) 1) ಗುಪ್ತ ಮಾಹಿತಿಯನ್ನು ಸಂಗ್ರಹಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಎಚ್ಚರಿಕೆಯ ಸಂದೇಶಗಳನ್ನು ಕಳುಹಿಸಲಾಗುತ್ತಿದೆ

2) ದಿ 05 06 2006ರಿಂದ ದಿ 10 06 2006ರವರೆಗೆ 30 ಪೊಲೀಸ್ ಅಧಿಕಾರಿಗಳಿಗೆ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಐ ಎಸ್ ಐ ಎಸ್ ಟಿ ಕಾರ್ಯಾಗಾರ ಏರ್ಪಡಿಸಿ ತರಬೇತಿ ನೀಡಲಾಗಿದೆ

3) ಸಬ್ಸಿಡಿಯರಿ ಮಲ್ಟಿ ಏಜೆನ್ಸಿ ಸೆಂಟರ್ (ಎಸ್ ಎಂ ಎ ಸಿ)ನ್ನು ರಾಜ್ಯದಲ್ಲಿ ಎಸ್ ಐ ಬಿ ಸಂಘಟನೆಯೊಂದಿಗೆ ಸ್ಥಾಪಿಸಲಾಗಿದೆ

ದಿನಾಂಕ 23 08 2006 ಮತ್ತು ದಿನಾಂಕ 13 12 2006ಗಳಂದು ಸಮನ್ವಯ ಸಭೆಗಳು ನಡೆದಿರುತ್ತವೆ

4) ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಸೌಮ್ಯದ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ದಿನಾಂಕ 16 10 2005 ಮತ್ತು ದಿನಾಂಕ 06 04 2006ಗಳಲ್ಲಿ ಸಭೆಗಳನ್ನು ನಡೆಸಿ ವಿಚಾರ ವಿನಿಮಯ ಮಾಡಲಾಗಿದೆ